

ಚಿತ್ರ: ಜಿ.ಕೆ. ಹೆಗಡೆ

ಪ್ರಶ್ನೆ. ಮುಸ್ಲಿಂ ಮಹಿಳೆಯಾಗಿ ಅವರು ಮಾಡಿದ ಸಾಧನೆ ನನಗೆ ಬೆರಗು. ನನಗಿರುವಂತೆಯೇ ಅವರಿಗೂ ಅಪಾರವಾದ ಜ್ಞಾನದ ಹಸಿವು ಇತ್ತು. ಹಾಗಾಗಿ, ನಾವಿಬ್ಬರು ಪರಸ್ಪರ ಅಂತರಂಗಕ್ಕೆಳೆದುಕೊಂಡೆವು. ತುಳುವಿನ 'ಮಂದಾರ ರಾಮಾಯಣ'ದ ಬಗ್ಗೆ ಅವರೊಂದಿಗೆ ಮಾತನಾಡುತ್ತಾ, 'ಸಾರಾ, ನೀವು ತುಳು ಕಲಿತಿದ್ದರೆ ನಾನು ಇದನ್ನು ಓದಿ ಹೇಳುತ್ತಿದ್ದೆ' ಎಂದು ಹೇಳಿದಾಗ, ಅವರು, 'ನೀವು ತುಳುವಿನ ಬಗ್ಗೆ ಮಾತ್ರ ಹೇಳುತ್ತೀರಲ್ಲ, ನನಗೆ ಪಂಪ, ರನ್ನ, ನಾರಣಪ್ಪರ ಹಳೆಗನ್ನಡ ಕಾವ್ಯವನ್ನೂ ಕಲಿಯಬೇಕೆಂಬ ಆಸೆಯಿದೆ, ಗೊತ್ತಾ? ಹಳೆಗನ್ನಡ ಸಾಹಿತ್ಯದ ಬಗ್ಗೆ ಅಜ್ಞಳಾದ ನನ್ನ ಬಗ್ಗೆ ನನಗೇ ಬೇಸರವೆನಿಸುತ್ತಿದೆ' ಎಂದು ಹೇಳಿ ನಿಟ್ಟುಸಿರು ಬಿಟ್ಟರು.

ಕನ್ನಡದ ಕೆಲವು ಸಾಹಿತಿಗಳು ಸಾರಾ